ಆ) ಯೋಜನೆ ಅಂದಾಜು ವೆಚ್ಚ ಎಷ್ಟು ;

ಇ) ಯೋಜನೆಗೆ ವಶಪಡಿಸಿಕೊಳ್ಳಲಾಗಿರುವ ಜಮೀನು ಎಷ್ಟು ;

ಈ) ಕೇಂದ್ರ ಸರ್ಕಾರ ಯೋಜನೆಗೆ ನೀಡಿರುವ ಅನುದಾನದ ಮೊತ್ತ ಎಷ್ಟು ;

ಉ) ಕಲಾಗ್ರಾಮ ನಿರ್ಮಾಣವು ಯಾವ ಹಂತದಲ್ಲಿದೆ ;

ಊ) ಪೂರ್ಣಗೊಳ್ಳುವುದು ಯಾವಾಗ ?

ಶ್ರೀ ಎನ್.ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಸಮಗ್ರ ಸಾಹಿತ್ಯ ಕಲೆ, ಜಾನಪ, ಸಂಸ್ಕೃತಿಯನ್ನು ಒಂದೆಡೆ ಪ್ರದರ್ಶಿಸುವುದಾಗಿದೆ.

ಆ) ಕಲಾಗ್ರಾಮದ ಸಮಗ್ರ ನಕಾಶೆಯನ್ನಷ್ಟೆ ಸಿದ್ದಪಡಿಸಲಾಗಿದ್ದು ಹಂತ ಹಂತವಾಗಿ ಕಾಮಗಾರಿಗಳನ್ನು ಮಾಡಲಾಗುತ್ತಿದ್ದು, ಸಮಗ್ರ ಅಂದಾಜು ವೆಚ್ಚ ಸಿದ್ದಪಡಿಸಬೇಕಾಗಿದೆ.

ಇ) 20 ಎಕರೆ

ಈ) ಇಲ್ಲ

ಉ) ನಾಲ್ಕು ಕುಟೀರಗಳು ಸಿದ್ದವಾಗಿವೆ.

ರಸ್ತೆ ನಿರ್ಮಾಣ ಆಗಿದೆ.

ಕೆರೆ ನಿರ್ಮಾಣ ಆಗುತ್ತಿದೆ.

ಬಯಲು ರಂಗಮಂದಿರ ನಿರ್ಮಾಣಕ್ಕೆಗೆತ್ತಿಕೊಳ್ಳಲಾಗುತ್ತಿದೆ.

ತಂತಿ ಬೇಲಿ ನಿರ್ಮಾಣವಾಗಿದೆ. ಕೊಳವೆ ಬಾವಿ ತೋಡಿಸಲಾಗಿದೆ.

ಊ) ಅವಧಿ ನಿಗದಿಪಡಿಸಿರುವುದಿಲ್ಲ.

284(414) ಶ್ರೀ.ಮೋಹನ್ ಪಿ.ಸಿ(ಚಿಕ್ಕಪೇಟೆ) ಮತ್ತು ಶ್ರೀ ಆರ್. ಅಶೋಕ್(ಉತ್ತರ ಹಳ್ಳಿ) ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ಸ್ಯಾಮೀಸ್ ಡ್ರೀಮ್‌ಲ್ಯಾಂಡ್‌ಲ್ಲಿ ಪ್ಯಾರಾಶೂಟ್ ಅಪಘಾತ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಅಪಘಾತದಲ್ಲಿ ಗಾಯ ಗೊಂಡವರ ಸಂಖ್ಯೆ ಎಷ್ಟು , ಇವರಿಗೆ ಆಗಿರುವ ಗಾಯಗಳ ಬಗ್ಗೆ ಪೂರ್ಣ ಮಾಹಿತಿ ನೀಡುವುದು;

ಇ) ಅಪಘಾತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಮಗ್ರ ತನಿಖೆ ನಡೆಸಲಾಗಿದೆಯೇ ;

ಈ) ಹಾಗಿದ್ದಲ್ಲಿ, ಅಪಘಾತಕ್ಕೆ ಕಾರಣಗಳೇನು ;

ಉ) ಅಪಘಾತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎನ್.ಧರ್ಮಸಿಂಗ್(ಮುಖ್ಯ ಮಂತ್ರಿಗಳು ) :

ಅ) ಬಂದಿದೆ

ಆ) ಈ ಅಪಘಾತದಲ್ಲಿ ಒಟ್ಟು 11 ಜನ ಘಾಯಗೊಂಡಿದ್ದಾರೆ. ಗಾಯಗೊಂಡವರ ಪೂರ್ಣ ಮಾಹಿತಿ ಹಾಗೂ ಗಾಯದ ಪ್ರಯಾಣ ಈ ಕೆಳಕಂಡಂತೆ ನಮೂದಿಸಿದೆ.

1) ಶ್ರೀ. ಹೆಚ್.ಡಿ. ಪಾಶ್ವನಾಥ್ ಸದರಿಯವರಿಗೆ ಎಡಮೊಣ ಕೈ, ಎಡ ಪಕ್ಕ ಬೆನ್ನು ಮೂಳೆಗೆ ಪೆಟ್ಟಾಗಿರುತ್ತದೆ.

2) ಶ್ರೀಮತಿ. ವಿಜಯ ಪಾಶ್ವನಾಥ್: ಬೆನ್ನು ಮೂಳೆಗೆ ಪೆಟ್ಟಾಗಿರುತ್ತೆ.
3) ಶ್ರೀ. ಹರಿಹಂತ್ : ಎದೆಗೆ, ಬೆನ್ನಿಗೆ ಮತ್ತು ಕುತ್ತಿಗೆ ಮೂಳೆಗೆ ಪೆಟ್ಟಾಗಿರುತ್ತದೆ.
4) ಶ್ರೀಮತಿ ವರ್ಷಹರಿಹಂತ್ : ಬೆನ್ನಲುಬು ಜಖಂಗೊಂಡಿರುತ್ತದೆ.
5) ಕು : ಮಹಿಮಾ ಹರಿಹಂತ್ : ಬಲಗಾಲು ಮುರಿದಿರುತ್ತದೆ.
6) ಶ್ರೀ : ಪದ್ಮರಾಜ್ ದೊಡ್ಡಮನಿ : ಬೆನ್ನಲುಬು ಜಖಂಗೊಂಡಿರುತ್ತದೆ
7) ಶ್ರೀ.ಜಿ.ನಂದನ್ ದೊಡ್ಡಮನಿ : ಸಣ್ಣಪುಟ್ಟ ಗಾಯಗಳು
8) ಕು : ನಯನ ದೊಡ್ಡಮನಿ : ಸಣ್ಣಪುಟ್ಟ ಗಾಯಗಳು
9) ಶ್ರೀಮತಿ ಸ್ವಯಂ ಪ್ರಭಾ : ಎಡಕೈ ಮತ್ತು ಬೆನ್ನೆಲುಬಿಗೆ ಪೆಟ್ಟಾಗಿರುತ್ತದೆ.
10) ಕು : ಸ್ಮಿತಾ ಕುಮಾರಿ : ಬೆನ್ನೆಲುಬಿಗೆ ಪೆಟ್ಟಾಗಿರುತ್ತದೆ.
11) ಶ್ರೀಮತಿ ಅನಿತರಾಜನ್ : ಬೆನ್ನೆಲುಬಿಗೆ ಪೆಟ್ಟಾಗಿರುತ್ತದೆ.

ಮೇಲ್ಕಂಡ ಗಾಯಳುಗಳು ಬೆಂಗಳೂರು ಮಲ್ಯ ಆಸ್ಪತ್ರೆಗೆ ಮತ್ತು ಹೊಸಮಟ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಆಸ್ಪತ್ರೆಯಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ಸಾಮಿಸ್ ಡ್ರೀಂಲ್ಯಾಂಡ್ ಕಂಪನಿಯಿಂದ ಆಸ್ಪತ್ರೆಯಿಂದ ಈ ತನಕ 7,10,000/- ಖರ್ಚಾಗಿರುವುದಾಗಿ ದಾಖಲೆಗಳಿಂದ ತಿಳಿದು ಬಂದಿರುತ್ತದೆ.

ಇ) ಹೌದು

ಈ) ಹೈಡ್ರಾಲಿಕ್ ತಾಂತ್ರಿಕ ದೋಷದಿಂದ ಘಟನೆ ಸಂಭವಿಸಿದೆ.

ಉ) ಹಾಲಿ ಮಾನ್ಯ ಜಿಲ್ಲಾಧಿಕಾರಿಯವರ ಆದೇಶ ಸಂಖ್ಯೆ : ಎಂಎಜಿ(2) ಸಿಆರ್/17/2003-04, ಆದೇಶದಂತೆ ಡ್ರೀಂಲ್ಯಾಂಡ್ ಕಂಪನಿಯ ಎಲ್ಲಾ ಮನೋರಂಜನಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಿ, ಕಂಪನಿಯ ಎಲ್ಲಾ ಆಟಗಳನ್ನು ಬಂದ್ ಮಾಡಿ, ಕಂಟ್ರೋಲ್ ಬೀಗವನ್ನು ಠಾಣಾ ವಶಕ್ಕೆ ಪಡೆದಿರುತ್ತದೆ.

ಮಾನ್ಯ ಜಿಲ್ಲಾಧಿಕಾರಿಯವರು ಸದರಿ ಕಂಪನಿಯ ಅಪಘಾತದ ಬಗ್ಗೆ ವರದಿ ನೀಡುವಂತೆ 4 ಜನ ಅಧಿಕಾರಿಗಳ ತಂಡವನ್ನು ರಚಿಸಿದ್ದು ಸದರಿ ತಂಡದಲ್ಲಿ ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ ರವರು ಅಪಘಾತದ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆ .

285(418) ಶ್ರೀ ಪಿ.ಸಿ.ಮೋಹನ್, ಎಂಎಲ್ಎ(ಚಿಕ್ಕಪೇಟೆ) ಶ್ರೀ ಆರ್.ಅಶೋಕ್ ಎಂ.ಎಲ್ಎ (ಉತ್ತರ ಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಭಾರೀ ಮಳೆಯಿಂದ ಉಂಟಾದ ರಸ್ತೆ ಗುಂಡಿಗಳನ್ನು ಮುಚ್ಚಲು ಆಂದೋಲನ ಹಮ್ಮಿಕೊಳ್ಳಲು ಪಾಲಿಕೆ ನಿರ್ಧರಿಸಿದೆಯೇ :

ಆ) ಇದಕ್ಕಾಗಿ ಗುರುತಿಸಿರುವ ರಸ್ತೆ ಗುಂಡಿಗಳೆಷ್ಟು :

ಇ) ಇವುಗಳ ಪೈಕಿ ಎಷ್ಟು ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ :

ಈ) ಈ ಕಾಮಗಾರಿ ಕೆಲಸಕ್ಕೆ ಪಾಲಿಕೆಗೆ ತಗಲುವ ವೆಚ್ಚವೆಷ್ಟು ;

ಉ) ತಾತ್ಕಾಲಿಕ ಗುಂಡಿ ಮುಚ್ಚುವ ಕಾರ್ಯಕ್ಕೆ ಬದಲಾಗಿ ಶಾಶ್ವತವಾದ ರಸ್ತೆ ನಿರ್ಮಿಸಲು ಪಾಲಿಕೆ ಯಾವ ಯಾವ ಕ್ರಮ ಕೈಗೊಂಡಿದೆ ?